## 5

# ಸತ್ಯ

*ಸತ್ಯ!* ನಿರ್ಧಾರಣಾಂಶ ಸತ್ಯವಾಗಿರುವದಿಲ್ಲ; ದೇವರು ಆಗಿದ್ದಾನೆ. ನಿತ್ಯನಾದ ಅನುಭವಾತೀತನಾದ ದೇವರು ಎಲ್ಲಾ ಪರಿಪೂರ್ಣ ಸತ್ಯದ ಕರ್ತೃವಾಗಿದ್ದಾನೆ. ದೇವರು ಇಲ್ಲದಿದ್ದರೆ, ಸತ್ಯವು ಅಸ್ತಿತ್ವದಲ್ಲಿರುವದಿಲ್ಲ. ನಮಗೆ ಅಭಿಪ್ರಾಯಗಳು, ಭಾವಣೆಗಳು ಮತ್ತು ಪೂರ್ವ ತಪ್ಪು ಕಲ್ಪನೆಗಳು ಇರಬಹುದು; ಆದರೆ ದೇವರಿಲ್ಲದೇ ಇರಬಹುದು, ಮಟ್ಟಗಳಿಲ್ಲದೇ ಇರಬಹುದು. ದೇವರಿಲ್ಲದೇ ನೈತಿಕತೆಗಳು ಅಸ್ತಿತ್ವದಲ್ಲಿರಲಾರವು. ದೇವರು ಇಲ್ಲದಿದ್ದರೆ, ಜೀವನದಲ್ಲಿ ಅರ್ಥವಿರುವದಿಲ್ಲ - ಉದ್ದೇಶವಿರುವದಿಲ್ಲ ಪ್ರಾಧಾನ್ಯತೆಗಳಿರುವದಿಲ್ಲ, ಅಂತಿಮ ಸ್ಥಿತಿಯಿರುವದಿಲ್ಲ.

ನಮ್ಮ ಸಂಸ್ಕೃತಿಯು ಯೋಚಿಸುವದರ ಬದಲು ಸತ್ತು ಹೋಗುವುದು. ಇಂದು ಪ್ರತಿ ಶತ 70 ಜನರು “ಪರಿಪೂರ್ಣವಾದ ಸತ್ಯವು ಇರುವದಿಲ್ಲ” ಎಂಬ ವಿಚಾರವನ್ನು ನುಂಗಿಕೊಂಡಿರುವರು. “ಪರಿಪೂರ್ಣ ಸತ್ಯವು ಇರುವದಿಲ್ಲ” ಎಂಬ ಸತ್ಯವನ್ನು ಮಾತ್ರವೇ ಅವರು ನಂಬುವರು. ಅವರ ಪ್ರಕಾರವಾಗಿ, “ನೀವು ತಿಳಿಯಲಾರಿರಿ ಎಂಬುದೇ ನೀವು ತಿಳಿಯ ಬಹುದಾದ ಎಲ್ಲವೂ ಆಗಿದೆ.” ಸತ್ಯವನ್ನು ನಂಬದಿರುವುದು ಮತ್ತು ಪ್ರೀತಿಸದಿರುವುದು ನಿತ್ಯ ಆತ್ಮಹತ್ಯೆಯಾಗಿರುತ್ತದೆ. ಪೂರ್ವವನ್ನು ಪಶ್ಚಿಮವೆಂದು, ಬಲಗಡೆಯನ್ನು ಎಡಗಡೆಯೆಂದು, ಮೇಲಿನದನ್ನು ಕೆಳಗಿನದೆಂದು ಯೋಚಿಸುವುದು ಹುಚ್ಚುತನವಾಗಿದೆ! ಎಲ್ಲಾ ಅಂಕಿಗಳು ಸರಿಯಾಗಿರದಿದ್ದರೆ, ನೀವು ಏಳು ಸಂಖ್ಯೆಯ ಫೋನ್ ನಂಬರನ್ನು ಡಯಲ್ ಮಾಡಲಾರಿರಿ! ಸಲಹೆಗಾರರು, ನ್ಯಾಯವಾದಿಗಳು, ವೈದ್ಯರು ಮತ್ತು ಪ್ರಸಂಗಿಗಳು ತಮ್ಮ ಬಳಿಗೆ ಬರುವವರು, ರೋಗಿಗಳು ಸತ್ಯವನ್ನು ಹೇಳಿದರೆ ಮಾತ್ರವೇ ಅವರಿಗೆ ಸಹಾಯ ಮಾಡಬಲ್ಲರು. ನ್ಯಾಯಾಲಯದಲ್ಲಿ ಒಬ್ಬನು, “ಸತ್ಯವನ್ನು ಹೇಳುತ್ತೇನೆ, ಪೂರ್ಣ ಸತ್ಯವನ್ನು ಹೇಳುತ್ತೇನೆ, ಮತ್ತು ಸತ್ಯವನ್ನಲ್ಲದೆ ಬೇರೆ ನನ್ನೂ ಹೇಳುವದಿಲ್ಲ” ಎಂದು ಆಣೆಯಿಟ್ಟು ಹೇಳುತ್ತಾನೆ. “ನನಗೆ ಸತ್ಯವನ್ನು ಹೇಳಿರಿ” ಎಂದು ಹತಾಶೆಭಾವನೆಯಲ್ಲಿ ವೈದ್ಯರನ್ನು ಕೇಳುತ್ತೇವೆ. ಸಮಾಜ ಮತ್ತು ವೈಯಕ್ತಿಕ ಸಮಗ್ರತೆಯು ಸತ್ಯದ ಮೇಲೆ ಮಾತ್ರವೇ ಕಟ್ಟಲ್ಪಟ್ಟಿರುತ್ತವೆ. ಸಂಪೂರ್ಣವಾದ ಸತ್ಯವು ಇರದಿದ್ದರೆ, ಆಗ ಪರಿಪೂರ್ಣವಾದ ಸುಳ್ಳು ಇರುವುದಿಲ್ಲ. ಸತ್ಯಕ್ಕೆ ಭಯಪಡದವರು ಸುಳ್ಳಿಗೆ ಭಯಪಡುವದಿಲ್ಲ. ಜೀವನದ ಉದ್ದೇಶವು ಸತ್ಯಕ್ಕಾಗಿ - ಪ್ರಸ್ತಾಪದ, ಉದ್ದೇಶದ, ಪರಿಪೂರ್ಣವಾದ ಸತ್ಯಕ್ಕಾಗಿ ಅನ್ವೇಷಣೆಯಾಗಿದೆ. ವಿಜ್ಞಾನವು ಸತ್ಯಕ್ಕಾಗಿ ಹಂಬಲವನ್ನು ಬಯಸುತ್ತದೆ. ಔಷಧವು ಸತ್ಯಕ್ಕಾಗಿ ಹಂಬಲವನ್ನು ಬಯಸುತ್ತದೆ. ಜೀವನವು ಸತ್ಯಕ್ಕಾಗಿ ಹಂಬಲವನ್ನು ಬಯಸುತ್ತದೆ.

“... ನಾನೇ ಮಾರ್ಗವೂ ಸತ್ಯವೂ ಜೀವವೂ ಆಗಿದ್ದೇನೆ ...” (ಯೋಹಾನ 14:6) ಎಂದು ಯೇಸು ಹೇಳಿದನು; “ಸತ್ಯವನ್ನು ತಿಳಿದುಕೊಳ್ಳುವಿರಿ; ಮತ್ತು ಸತ್ಯವು ನಿಮ್ಮನ್ನು ಬಿಡುಗಡೆ ಮಾಡುವುದು” (ಯೋಹಾನ 8:32). ದೇವರು ಸತ್ಯದ ದೇವರಾಗಿರುವನು.

> ಆ ವಾಕ್ಯವೆಂಬವನು ನರಾವತಾರ ಎತ್ತಿ ನಮ್ಮ ಮಧ್ಯದಲ್ಲಿ ವಾಸ ಮಾಡಿದನು. ನಾವು ಆತನ ಮಹಿಮೆಯನ್ನು ನೋಡಿದೆವು; ಆ ಮಹಿಮೆಯು

> ತಂದೆಯ ಬಳಿಯಿಂದ ಬಂದ ಒಬ್ಬನೇ ಮಗನಿಗೆ ಇರತಕ್ಕ ಮಹಿಮೆ. ಆತನು ಕೃಪೆಯಿಂದಲೂ ಸತ್ಯದಿಂದಲೂ ತುಂಬಿದವನಾಗಿದ್ದನು (ಯೋಹಾನ 1:14).
>
> ಕೃಪೆಯೂ ಸತ್ಯವೂ ಯೇಸು ಕ್ರಿಸ್ತನ ಮುಖಾಂತರ ಬಂದವು (ಯೋಹಾನ 1:17ಬಿ).
>
> "ಇವರನ್ನು ಸತ್ಯದಲ್ಲಿ ಸೇರಿಸಿ ಪ್ರತಿಷ್ಠೆಪಡಿಸು; ನಿನ್ನ ವಾಕ್ಯವೇ ಸತ್ಯವು" (ಯೋಹಾನ 17:17).
>
> ಪ್ರೀತಿಯಿಂದ ಸತ್ಯವನ್ನನುಸರಿಸುತ್ತಾ (ಎಫೆಸ 4:15ಎ).
>
> "ಸತ್ಯದ ಆತ್ಮನು ಬಂದಾಗ ಆತನು ನಿಮ್ಮನ್ನು ನಡಿಸಿಕೊಂಡು ಹೋಗಿ ಸಕಲ ವಿಷಯದಲ್ಲಿಯೂ ಸತ್ಯಕ್ಕೆ ಸೇರಿಸುವನು" (ಯೋಹಾನ 16:13ಎ).
>
> ಆ ಸಭೆಯು ಸತ್ಯಕ್ಕೆ ಸ್ತಂಭವೂ ಆಧಾರವೂ ಆಗಿದೆ (1 ತಿಮೊಥೆ 3:15ಬಿ).

ಕ್ರೈಸ್ತ ಜೀವನಕ್ಕಾಗಿ ಸತ್ಯವು ಅಸ್ತಿವಾರವಾಗಿದೆ. ಅನುದಿನದ ನಡೆಯು "ಸತ್ಯದ ನಡೆಯಾಗಿದೆ." ಸತ್ಯದ ಬಗ್ಗೆ ಗಮನಿಸದೇ ಇರುವಂಥದ್ದು ದೇವರ ಬಗ್ಗೆ ಗಮನಿಸದೇ ಇರುವಂಥದ್ದಾಗಿದೆ. ಸತ್ಯವು ಒಬ್ಬ ವ್ಯಕ್ತಿ - ಯೇಸು ಕ್ರಿಸ್ತನು ದೇವರು ಸತ್ಯದ ದೇವರಾಗಿದ್ದಾನೆ. ದೇವರು ನಮ್ಮನ್ನು ಪ್ರೀತಿಸುವದರಿಂದ, ಆತನು ನಮಗೆ ಯಾವಾಗಲೂ ಸತ್ಯವನ್ನು ಹೇಳುವನು. ನಾವು ತಿಳಿಯಬೇಕು, ನಂಬಬೇಕು ಮತ್ತು ಸತ್ಯಕ್ಕೆ ವಿಧೇಯರಾಗಬೇಕು ಎಂದು ದೇವರು ಬಯಸುತ್ತಾನೆ. ದೇವರು ಭಾವನೆಗಳ, ರಹಸ್ಯ ಅನುಭವಗಳ ಇಲ್ಲವೇ ಭ್ರಮೆಗಳ ದೇವರಾಗಿರುವದಿಲ್ಲ. ದೇವರ ಮೇಲಿನ ನಂಬಿಕೆಯು ಅವಲಂಭಿತ ಪುರಾವೆಗಳ ಮೇಲೆ ಮತ್ತು ಸಾಮಾನ್ಯ ಭಾವನೆಯ ಮೇಲೆ ಕಟ್ಟಲ್ಪಟ್ಟ ಬುದ್ಧಿವಂತಿಕೆಯ ವಿಶ್ವಾಸವಾಗಿದೆ. ಭಾವನೆಗಳು ಸತ್ಯಕ್ಕೆ ಪರ್ಯಾಯವಾದವುಗಳಲ್ಲ. ಸತ್ಯವನ್ನು ಯಾರೂ ನಂಬದಿದ್ದರೂ ಸತ್ಯವು ಸತ್ಯವೇ ಆಗಿದೆ. ಸತ್ಯವನ್ನು ಕೆಳಗೆ ಹಾಕುವಾಗ ನೀವು ಐಕ್ಯತೆಯನ್ನು ಪ್ರಸಿದ್ಧಿ ಪಡಿಸಲಾರಿರಿ. ನಮ್ಮ ಸಂಸ್ಕೃತಿಯು ಈಗ, "ಸತ್ಯ ಸ್ವತಂತ್ರವಾದ ವಿಭಾಗ" ಆಗಿದೆ. ನಮ್ಮ ಸಂಸ್ಕೃತಿಯು ಸಂಪೂರ್ಣವಾಗಿ ನಿಯಂತ್ರಣವನ್ನು ಕಳೆದುಕೊಂಡಿದೆ!

ನಾವು ಕೇಳತಕ್ಕದ್ದು, ಕಲಿಯತಕ್ಕದ್ದು ಮತ್ತು ಜೀವಿಸತಕ್ಕದ್ದು. ಸತ್ಯದಂಥ ಸರಕು ಇರುವುದಿಲ್ಲ. ಇತ್ತೀಚೆಗೆ, ಒಂದು ಬಹಿರಂಗ ಕೂಟದಲ್ಲಿ, ಒಬ್ಬ ಭಾಷಣಕಾರನು, ಅವನು ತಪ್ಪಾಗಿದ್ದಿರಬಹುದಲ್ಲವೇ ಎಂದು ಕೇಳಲ್ಪಟ್ಟನು. "ಹೌದು" ... ಅನಂತರ "ಇಲ್ಲ" ಎಂದು ಅವನು ಉತ್ತರ ಕೊಟ್ಟನು. ಪ್ರಶ್ನೆಯ ಉದ್ದೇಶ ಯಾವುದಿತ್ತು? ಎಲ್ಲರೂ ತಪ್ಪಾಗಿರುವಾಗ, ಯಾರೂ ಸರಿಯಾಗಿರುವದಿಲ್ಲ. ನಾನು ತಿಳಿಯಲಾರನು ಎಂಬುದನ್ನೇ ನಾನು ತಿಳಿಯುವುದು ಎಲ್ಲವೂ ಆಗಿದ್ದರೆ, ಜೀವನವೂ ಸಹಾಯ ಹೀನತೆಯುಳ್ಳದ್ದಾಗುತ್ತದೆ. ನಾವು ನೋಡಿ ನಡೆಯುವದಿಲ್ಲ, ನಂಬಿ ನಡೆಯುತ್ತೇವೆ. ಆದಾಗ್ಯೂ "ನಾವೆಲ್ಲರೂ ಪರಲೋಕಕ್ಕೆ ಹೋಗುವವರಾಗಿದ್ದೇವೆ" ಎಂದು ನಮ್ಮ ಸಂಸ್ಕೃತಿ ನಂಬುತ್ತದೆ. ಅದನ್ನು ಅವರು ಹೇಗೆ ತಿಳಿದಿದ್ದಾರೆ? ನಂಬಿಕೆಯಿಂದ ನಾವು ತಿಳಿಯಬಹುದಾದ ಸಂಗತಿಗಳು ಇರುತ್ತವೆ. ನಾವು ತಿಳಿದಿರುವೆವೆಂದು ತಿಳಿಯಬಹುದೆಂದು ಲೂಕನು ಬರೆದನು (ಲೂಕ 1:1-4). ನಿತ್ಯಜೀವವನ್ನು ನಾವು ತಿಳಿದಿದ್ದೇವೆಂದು ಯೋಹಾನನು ಹೇಳಿದನು (1 ಯೋಹಾನ 5:11-13). ಪ್ರತಿಯೊಂದನ್ನೂ

ತಿಳಿಯದಿರುವದು ಕೆಲವೊಂದನ್ನು ನಾವು ತಿಳಿಯಲಾರೆವು ಎಂದರ್ಥವಾಗುವದಿಲ್ಲ. ಕ್ರೈಸ್ತತ್ವವು ಯೋಚಿಸುವದಕ್ಕಿಂತ ಹೆಚ್ಚಿನದಾಗಿದೆ; "ಯೋಚಿಸದಿರುವದಕ್ಕಿಂತಲೂ" ಅದು ಎಷ್ಟೋ ಹೆಚ್ಚಿನದಾಗಿದೆ. ಸತ್ಯವು ಮೂಲಕ್ಕೆ ನಿಷ್ಠೆಯುಳ್ಳದ್ದಾಗಿದೆ. ಹೌದು, ನಾನು ತಪ್ಪಾಗಿರಬಹುದು - ಆದರೆ ನಾನು ಸರಿಯಾಗಿರಲೂ ಬಹುದು. ಎಫೆಸ 4:1-6ರಲ್ಲಿ ಏಳು "ಒಂದುಗಳನ್ನು" ಪೌಲನು ಯಾದಿ ಮಾಡಿದ್ದಾನೆ, *ನಾವಿಲ್ಲಿ ನಿಂತುಕೊಳ್ಳುತ್ತೇವೆ!*

ನಾವೆಲ್ಲರೂ ಪ್ರಾರ್ಥಿಸ ಬಹುದಾದ ಮತ್ತು ಉತ್ತರ ಕೊಡುವ ಒಂದು ಅನುದಿನದ ಪ್ರಾರ್ಥನೆ ಫುರ್‌ಮಾನ್ ಕೆಲ್ಲಿ ಅವರಲ್ಲಿದೆ: "ಕರ್ತನೇ, ಸತ್ಯವನ್ನು ಪ್ರೀತಿಸಲು, ಸತ್ಯವನ್ನು ಹುಡುಕಲು, ಸತ್ಯವನ್ನು ಕಂಡುಕೊಳ್ಳಲು, ಸತ್ಯವನ್ನು ನಂಬಲು, ಸತ್ಯಕ್ಕೆ ವಿಧೇಯರಾಗಲು, ಸತ್ಯವನ್ನು ಬೋಧಿಸಲು, ಮತ್ತು ಸತ್ಯದಲ್ಲಿ ಐಕ್ಯವಾಗಿರಲು ನಮಗೆ ಸಹಾಯಮಾಡು." ಆಮೆನ್! ನಮ್ಮ ಅತೀ ದೊಡ್ಡ ಅವಕಾಶವು ಪ್ರೀತಿಯಲ್ಲಿ ಸತ್ಯವನ್ನು ಜೀವಿಸುವುದು.

◇◇◇◇◇◇◇◇◇

# ಸಭೆ

## ಎಫೆಸ 5:21-33

*"ಆತನು ಸಮಸ್ತವನ್ನೂ ಕ್ರಿಸ್ತನ ಪಾದಗಳ ಕೆಳಗೆ ಹಾಕಿದನು. ಇದಲ್ಲದೆ. ಆತನನ್ನು ಎಲ್ಲಾದರ ಮೇಲೆ ಇರಿಸಿ ಸಭೆಗೆ ಶಿರಸ್ಸಾಗಿ ನೇಮಿಸಿದನು. ಸಭೆಯು ಆತನ ದೇಹವಾಗಿದೆ; ಎಲ್ಲವನ್ನೂ ಎಲ್ಲಾ ಸಂಬಂಧದಲ್ಲಿ ವ್ಯಾಪಿಸುವಾತನಿಂದ ಅದು ಪರಿಪೂರ್ಣತೆಯುಳ್ಳದ್ದಾಗಿದೆ" (ಎಫೆಸ 1:22, 23).*

ದೇವರ ಸಭೆಯನ್ನು ಸಂಸ್ಕೃತಿಯು ಹೇಗೆ ನೋಡುತ್ತದೆ ಮತ್ತು ನಡಿಸಿಕೊಳ್ಳುತ್ತದೆ ಎಂಬ ಕಾರಣದಿಂದ ಈ ಪಾಠವು ಮುರಿದ ಹೃದಯದಿಂದಲೂ ಕಣ್ಣೀರಿನಿಂದಲೂ ಬರೆಯಲ್ಪಟ್ಟಿದೆ. ಸಭೆಯು "ರಾಜಕೀಯವಾಗಿ ಸರಿಯಾದದ್ದಾಗಿ" ಇರುವದಿಲ್ಲ. ಅದು "ಒಳಗೆ" ಇರುವದಿಲ್ಲ; ಅದು "ಹೊರಗೆ" ಇರುತ್ತದೆ. ಜಗತ್ತು ಸಭೆಯನ್ನು ಎದುರಿಸುತ್ತದೆ; ಜಗತ್ತು ಸಭೆಗೆ ಅಪಹಾಸ್ಯ ಮಾಡುತ್ತದೆ. ಸಹನೆಯನ್ನು ಪ್ರಚೋಧಿಸುತ್ತಿರುವವರು ಮೂರು ಗುಂಪುಗಳ ಬಗ್ಗೆ ಸಹನೆಯಿಲ್ಲದವರಾಗಿದ್ದಾರೆ: (1) ಸ್ಥೂಲಕಾಯವುಳ್ಳವರು, (2) ಫರಿಸಾಯರು, ಮತ್ತು (3) ಸಭೆ. ಸಭೆಯು ಲೌಕಿಕ ಜಗತ್ತಿಗೆ ಪ್ರಸ್ತುತವಲ್ಲದ್ದಾಗಿದೆ. ಹೀಗಿದ್ದರೂ, ಜಗತ್ತಿಗೆ ಪ್ರಸ್ತುತವಾಗಿರಲು ಸಭೆಯು ಜಗತ್ತಿನಿಂದ ಭಿನ್ನವಾಗಿರತಕ್ಕದ್ದು. ಪ್ರಸ್ತುತವಾಗಿರಬೇಕು ಅಂದರೆ ನಿತ್ಯವಾಗಿರುವ ಸಂಗತಿಗಳು ಎಂದು ಹೇಳುವುದಾಗಿದೆ. ಸಭೆಯು ಪ್ರತಿಕೂಲ ಸಂಸ್ಕೃತಿಯಾಗಿದೆ. ಸಭೆಯು ಲೋಕದಲ್ಲಿ ಇದೆ ಆದರೆ ಲೋಕ ದ್ದಾಗಿರುವದಿಲ್ಲ. ಲೌಕಿಕ ಸಭೆಯು ದೇವಧೂಷಣೆಯದಾಗಿದೆ. ಸಭೆಯು ಭೂಮಿಗೆ ಉಪ್ಪು ಮತ್ತು ಜಗತ್ತಿಗೆ ಬೆಳಕೂ ಆಗಿರುತ್ತದೆ. ಅದು ಬೆಳಕಾಗಿರುವ ಮೊದಲು ಉಪ್ಪು ಆಗಿರತಕ್ಕದ್ದು. ಸಭೆಯು ಈಗಾಗಲೇ ಅಕ್ಷರಶಃವಾಗಿ ಹಿಂಸಿಸಲ್ಪಡುತ್ತಲಿದೆ. ಬಹುಶಃ - ನಾವು ಯೋಚಿಸುವದಕ್ಕಿಂತ - ಬೇಗನೇ - ಅದು ದೈಹಿಕವಾಗಿ ಹಿಂಸಿಸಲ್ಪಡುವುದು. ನಾವು ಸಿದ್ಧರಾಗಿರುವೆವೋ? "ಸಭ್ಯವಾದ" ಕ್ರೈಸ್ತತ್ವಕ್ಕಾಗಿ ಇದು ಸಮಯವಾಗಿರುವದಿಲ್ಲ.

ಧರ್ಮವೂ ಸಹ ಸಭೆಯನ್ನು ತಿರಸ್ಕರಿಸುತ್ತದೆ. "ಹೊಸ ಒಡಂಬಡಿಕೆಯ ಸಭೆಯು

ಇಂದು ಅಸ್ತಿತ್ವದಲ್ಲಿರಲಾರದು, ಅದು ಇದ್ದರೆ, ಅದನ್ನು ನಾವು ಬಯಸಲಾರೆವು'' ಎಂದು ಅನೇಕರು ಯೋಚಿಸುತ್ತಾರೆ. ಅದು ಯಾಕೆ ಇಂದು ಅಸ್ತಿತ್ವದಲ್ಲಿರಬಾರದು? ದೇವರು ಇನ್ನೂ ದೇವರಾಗಿರುವನೋ? ಕ್ರಿಸ್ತನ ಶಿಲುಬೆಯು ಇನ್ನೂ ಸುವಾರ್ತೆಯಾಗಿರುವುದೋ? ಸುವಾರ್ತೆಯು ಇನ್ನೂ ನಮ್ಮನ್ನು ರಕ್ಷಿಸಬಲ್ಲದೋ? ಅಪೊಸ್ತಲರ ಕೃತ್ಯಗಳು 2ರಲ್ಲಿ ದೇವರು ''ಸಭೆಯ ವ್ಯವಹಾರದಲ್ಲಿ'' ತೊಡಗಿದನು (ಪಂಚಾಶತ್ತಮ ಹಬ್ಬದ ದಿನದಂದು). ''ಸಭೆಯ ವ್ಯವಹಾರವನ್ನು''! ದೇವರು ಬಿಟ್ಟು ಹೋದನು ಎಂದು ಹೇಳುವ ಪರಿಶುದ್ಧ ಬರಹವನ್ನು ನನಗೆ ತೋರಿಸಿರಿ. ಸಭಾಪಂಗಡಗಳಿಗಾಗಿ ಪರಿಶುದ್ಧ ಬರಹದ ಬೆಂಬಲವಿರುವದಿಲ್ಲ. ''ಸಭಾಪಂಗಡದ ವ್ಯವಹಾರದಲ್ಲಿ'' ದೇವರು ಎಂದೂ ಪ್ರವೇಶಿಸಲಿಲ್ಲ. ದೇವರು ಮೊದಲನೆಯ ಸಭೆಯನ್ನು ಮಾಡಿದಾಗ, ಅದನ್ನು ಸರಿಯಾಗಿ ಮಾಡಿದನು. ಸಭಾಪಂಗಡಗಳು ಮನುಷ್ಯರಿಂದ ಬಂದವುಗಳಾಗಿವೆ. ದೇವರು ತನ್ನ ಸಭೆಯೊಂದಿಗೆ ಸೋತು ಹೋಗಿದ್ದರೆ, ಮನುಷ್ಯರು ಸಭಾಪಂಗಡಗಳೊಂದಿಗೆ ಹೇಗೆ ಜಯಿಸಬಹುದು? ಇದು ಉನ್ನತ ಕ್ರಮದ ಊಹನೆಯಾಗಿದೆ! ಕ್ರಿಸ್ತನ ಸಭೆಯನ್ನು ಬಿಟ್ಟು ಬೇರೆ ಯಾವುದೇ ಸಭೆಯ ಸದಸ್ಯನಾಗಿರಲು ನಾನು ಬಯಸುವದಿಲ್ಲ. ರಕ್ಷಿಸಲ್ಪಟ್ಟವರು ಇನ್ನೂ ಸಭೆಗೆ ಕೂಡಿಸಲ್ಪಡುತ್ತಿದ್ದಾರೆ (ಅಪೊಸ್ತಲರ ಕೃತ್ಯಗಳು 2:41, 47). ಸತ್ಯದಂತೆ, ದೇಹವು (ಸಭೆಯು) ಸಮಯವನ್ನು, ಸ್ಥಳವನ್ನು ಮತ್ತು ಜನರನ್ನು ದಾಟಿ ಹೋಗುತ್ತದೆ. ರಕ್ಷಿಸಲ್ಪಟ್ಟವರು ಸಭೆಯಾಗಿರುತ್ತಾರೆ. ಸಭೆಯನ್ನು ಬಿಟ್ಟು ಹೋದಾಗ ತಾವು ದೇವರನ್ನು ಬಿಟ್ಟು ಹೋಗಲಿಲ್ಲ ಎಂದು ಜನರು ಯೋಚಿಸುತ್ತಾರೆ. ಆದರೆ ಅವರು ಬಿಟ್ಟು ಹೋದರು. ಸಭೆಯ ಸ್ಪಷ್ಟವಾದ ದರ್ಶನವಿಲ್ಲದೆ ಯೇಸುವನ್ನು ನೀವು ಅರ್ಥಮಾಡಿಕೊಳ್ಳಲಾರಿರಿ. ನಾವೆಲ್ಲರೂ ಒಂದೇ ಒಂದು ದೇಹದಲ್ಲಿದ್ದೇವೆ, ಯಾಕಂದರೆ ಒಬ್ಬನೇ ಆತ್ಮನು ನಮ್ಮೆಲ್ಲರನ್ನು ಕ್ರಿಸ್ತನಲ್ಲಿ ಬಾಪ್ತಿಸ್ಮ ಮಾಡಿಸಿದ್ದಾನೆ. ಕ್ರಿಸ್ತನ ಜೀವಿತದ ಮೇಲೆ ಒಯ್ಯುವ ಸಭೆಯ ಸದಸ್ಯನಾಗಿರಲು ನಾನು ಬಯಸುತ್ತೇನೆ.

1960ರಿಂದ ಧಾರ್ಮಿಕ ಜಗತ್ತು, ''ನಾನು ಯೇಸುವನ್ನು ಪ್ರೀತಿಸುತ್ತೇನೆ, ಆದರೆ ಸಭೆಯನ್ನು ದ್ವೇಷಿಸುತ್ತೇನೆ'' ಎಂದು ಹೆಮ್ಮೆಯಿಂದ ಹೇಳಿದೆ. ಇದು ಹೇಗಾಗ ಬಹುದು? ಇದು ಪರಿಶುದ್ಧಬರಹಕ್ಕನುಗುಣವಾಗಿರುವದಿಲ್ಲ - ಕ್ರಿಸ್ತನನ್ನು ಆತನ ಸಭೆಯಿಂದ ಬೇರ್ಪಡಿಸಲಾಗದು. ಅದಕ್ಕೆ ಅರ್ಥವಿರಲಾರದು. ಪತಿಯಾಗಿ ನಾನು ನನ್ನ ಹೆಂಡತಿಯು ತಿರಸ್ಕರಿಸಲ್ಪಟ್ಟ ಸ್ಥಳಕ್ಕೆ ನಾನು ಹೋಗುವದಿಲ್ಲ! ನೀವು ನನ್ನನ್ನು ಅಪಮಾನಗೊಳಿಸಲಾರಿರಿ! ನನ್ನ ಹೆಂಡತಿಯು ನನ್ನ ಮಹಿಮೆಯೂ, ನನ್ನ ಆನಂದವೂ ಆಗಿರುವಳು! ತಪ್ಪು ಅರ್ಥಮಾಡಿಕೊಂಡ ವ್ಯಕ್ತಿಗಳು, ''ನಾನು ನಂಬುತ್ತೇನೆ, ಆದರೆ ನಾನು ಒಳಗೊಂಡಿರುವದಿಲ್ಲ'' ಎಂದು ಹೆಮ್ಮೆಯಿಂದ ಹೇಳಿ ಕೊಳ್ಳುತ್ತಾರೆ. ನೀವು ನಂಬಲಾರಿರಿ ಹಾಗೂ ಒಳಪಟ್ಟವರಾಗಿರಲಾರಿರಿ. *ವಿಶ್ವಾಸಿಗಳು ಒಳಪಟ್ಟವರಾಗಿರುತ್ತಾರೆ!* ಜನರು ಒಳಪಟ್ಟಿರುವದಿಲ್ಲ ಯಾಕೆಂದರೆ ಅವರು ನಂಬುವದಿಲ್ಲ. ಲೋಕದಿಂದ ದೇವರು ಸ್ವೀಕರಿಸಲ್ಪಡಬೇಕಾಗಿದ್ದರೆ, ಆತನು ಮೊದಲು ಸಭೆಯಲ್ಲಿ ಮಹಿಮೆಪಡಿಸಲ್ಪಡತಕ್ಕದ್ದು.

ಮದುವೆಯಂತೆ, ಸಭೆಯು ಹೊರಟು ಹೋಗುವದಿಲ್ಲ. ಪ್ರತಿದಿನ ಪ್ರತಿಯೊಂದು ಸಮಾಜದಲ್ಲಿ ಇನ್ನೊಂದು ''ಸಭೆಯು,'' ಬೋಧನೆಯಿಲ್ಲದೆ, ಹೆಸರಿಲ್ಲದೆ, ಇತಿಹಾಸವಿಲ್ಲದೆ, ಸಾಂಪ್ರದಾಯವಿಲ್ಲದೇ ಹುಟ್ಟಿಬರುತ್ತದೆ. ತನ್ನ ಸ್ವಂತ ಸಭೆಯನ್ನು ಪ್ರಾರಂಭಿಸಲು ಯಾವುದೇ ಮನುಷ್ಯನು (ಇಲ್ಲವೇ ಗುಂಪು) ಯಾರಾಗಿದ್ದಾರೆ? ದೇವರು ತನ್ನ ಸಭೆಯನ್ನು ಬಿಟ್ಟು ಏನನ್ನೂ ಮಾಡಲಾರನು.

ಭೂಮಿಯ ಮೇಲೆ ದೇವರಿಗೆ ಒಂದೇ ಒಂದು ಜನಾಂಗವಿರುವುದು.
ಆತನು ಅವರಿಗೆ ಒಂದೇ ಒಂದು ಪುಸ್ತಕ ಕೊಟ್ಟಿರುವನು.
ಅವರು ಒಂದೇ ಕುಟುಂಬವಾಗಿರುವಂತೆ ಅವರಿಗೆ ಆಜ್ಞಾಪಿಸಿರುವನು.

## ಸಭೆಯು ದೈವಿಕವಾದದ್ದಾಗಿದೆ

"ಸಭೆಯು ದೈವಿಕವಾದದ್ದು": ಈ ಹೇಳಿಕೆಯು "ನಮ್ಮ ಕಿವಿಗಳಲ್ಲಿ ಮುಳುಗಿ ಹೋಗಲಿ" (ಲೂಕ 9:44). *ಸಭೆಯು ದೈವಿಕವಾದದ್ದಾಗಿದೆ!* ಸಭೆಯು ಹೊಸ ಒಡಂಬಡಿಕೆಯಲ್ಲಿ ಪರಿಶುದ್ಧ ಸಂಸ್ಥೆಯಾಗಿದೆ. ದೇವರು ಸಭೆಯನ್ನು ಪ್ರೀತಿಸುತ್ತಾನೆ: ಯೇಸುವು ಸಭೆಯನ್ನು ಪ್ರೀತಿಸುತ್ತಾನೆ. ನಾನು ಸಭೆಯನ್ನು ಪ್ರೀತಿಸುತ್ತೇನೆ! ಸಭೆಯು ದೇವರ ಬಗ್ಗೆ ಸತ್ಯವಾಗಿದೆ. ಸಭೆಯ ಮುಖಾಂತರ ದೇವರ ವಿವಿಧ ಜ್ಞಾನವು ಪ್ರದರ್ಶಿಸಲ್ಪಟ್ಟಿದೆ (ಎಫೆಸ 3:9-11). ಸಭೆಯು ಬಂಡೆಯ ಆಸ್ತಿವಾರದ ಮೇಲಿದೆ, ರಕ್ತದಿಂದ ಕೊಳ್ಳಲ್ಪಟ್ಟಿದೆ, ಪರಿಶುದ್ಧಾತ್ಮನಿಂದ ತುಂಬಿಸಲ್ಪಟ್ಟಿದೆ, ನರಕಕ್ಕೆ ಒಳಪಡದಂಥದ್ದಾಗಿದೆ, ಮತ್ತು ಪರಲೋಕದ ಕಡೆಗೆ ಹೋಗುವಂಥದ್ದಾಗಿರುತ್ತದೆ (ನೋಡಿರಿ ಮತ್ತಾಯ 16:13-19). ದೇವರ ಅತೀ ದೊಡ್ಡ ದಾನವು (ಕ್ರಿಸ್ತನು) ಸಭೆಯನ್ನು ವಿಮೋಚಿಸಿತು (ಯೋಹಾನ 3:16; 2 ಕೊರಿಂಥ 9:15). ಜಗತ್ತಿನ ಅತೀ ದೊಡ್ಡ ಕ್ರಯದಿಂದ ಸಭೆಯು ಕೊಂಡುಕೊಳ್ಳಲ್ಪಟ್ಟಿತು (ಕ್ರಿಸ್ತನ ರಕ್ತ; ಅಪೊಸ್ತಲರ ಕೃತ್ಯಗಳು 20:28; ಎಫೆಸ 5:25; 1 ಪೇತ್ರ 1:18, 19). ಯೇಸುವು ದೇಹದ, ಸಭೆಯ ಶಿರಸ್ಸಾಗಿದ್ದಾನೆ (ಕೊಲೊಸ್ಸೆ 1:18). ಯೇಸುವು ತನಗೆ ಮಹಿಮೆಯುಳ್ಳ ಸಭೆಯನ್ನು ಕೊಟ್ಟುಕೊಳ್ಳುತ್ತಾನೆ (ಎಫೆಸ 5:27) ಗಂಡ ಮತ್ತು ಹೆಂಡತಿಯರ ಮಧ್ಯದಲ್ಲಿ ಅಸ್ತಿತ್ವದಲ್ಲಿರುವ ಅದೇ ಸಂಬಂಧವು ಕ್ರಿಸ್ತನು ಮತ್ತು ಆತನ ಸಭೆಯ ಮಧ್ಯದಲ್ಲಿ ಅಸ್ತಿತ್ವದಲ್ಲಿರುವುದು (ಎಫೆಸ 5:31-33).

ಅಪೊಸ್ತಲರ ಕೃತ್ಯಗಳಿಂದ ಪ್ರಕಟನೆಯವರೆಗೆ, ಬೈಬಲು ಸಂಪೂರ್ಣವಾಗಿ ಸಭೆಯಲ್ಲಿಯ ಜೀವನದ ಮೇಲೆ ಕೇಂದ್ರೀಕರಿಸುತ್ತದೆ. ಸಭೆಯನ್ನು ಬಿಟ್ಟು ದೇವರು ಏನನ್ನೂ ಮಾಡುವದಿಲ್ಲ. ಯೇಸುವನ್ನು ಹಿಂಬಾಲಿಸುವುದು ಆತನ ಸಭೆಗೆ ಒಳಗೊಂಡಿರುವುದು ಮತ್ತು ಅದರ ಶಿಸ್ತು ಪಾಲನೆಗೆ ಒಪ್ಪಿಸಿಕೊಡುವುದು ಆಗಿರುತ್ತದೆ. ದೇಹದಲ್ಲಿ ಮಾತ್ರವೇ ಆತ್ಮನು ಮಾಡುವಂಥದ್ದನ್ನು ನಾವು ಕಂಡುಕೊಳ್ಳಬಹುದು. ಸಭೆಯು ದೈವಿಕವಾದದ್ದು. "ಕ್ರಿಸ್ತನಿಲ್ಲದ ಸಭೆ" ಮತ್ತು "ಸಭೆಯಿಲ್ಲದ ಕ್ರಿಸ್ತನು" ಎರಡೂ ತಪ್ಪಾದವುಗಳಾಗಿರುತ್ತವೆ. ಸಭೆಯು ಒಬ್ಬ ವ್ಯಕ್ತಿ (ಕ್ರಿಸ್ತನು), ಒಂದು ಘೋಷಣೆ (ಸುವಾರ್ತೆ) ಮತ್ತು ಒಂದು ಜನಾಂಗ (ನಾವು) ಆಗಿರುತ್ತದೆ. ಸಭೆಯು ದೈವಿಕವಾಗಿರುವದನ್ನು ತಿಳಿದುಕೊಳ್ಳುವುದು ಸಭೆಯನ್ನು ಆಳವಾಗಿ ಪ್ರೀತಿಸಲಿಕ್ಕೆ ನಮಗೆ ಕಾರಣವಾಗತಕ್ಕದ್ದು ಮತ್ತು ನಮ್ಮ ಮಕ್ಕಳಿಗೆ ಅದನ್ನೇ ಮಾಡಲು ಬೋಧಿಸತಕ್ಕದ್ದು. ಯಾರಿಗೆ ಸಭೆಯ ಅಗತ್ಯತೆ ಇದೆ? ನನಗಿದೆ!

## ಕ್ರೈಸ್ತತ್ವವು ಸಮುದಾಯವಾಗಿದೆ (ಸಭೆ)

ಕ್ರೈಸ್ತತ್ವವು ಸಭೆಯ ಹೊರಗೆ, ಸಭೆಯು ಇಲ್ಲದೇ ಜೀವಿಸಲಾರದು. ಕ್ರೈಸ್ತತ್ವವು ಒಂದು ಸಂಗತಿ ಹಾಗೂ "ಚರ್ಚಾನಿಟಿ" ಮತ್ತೊಂದು ಸಂಗತಿಯಾಗಿರುವದಿಲ್ಲ. ಕ್ರೈಸ್ತತ್ವವು ವೈಯಕ್ತಿಕವಾದದ್ದೂ ಬಹಿರಂಗವಾದದ್ದೂ ಆಗಿರುತ್ತದೆ. ದೇವರ ಕುಟುಂಬವು ಸಭೆಯಾಗಿರದಿದ್ದರೆ, ಆಗ ಅದು ಏನಾಗಿರುವುದು? ಸೈನ್ಯವನ್ನು ಹೊರತುಪಡಿಸಿ ಸೈನಿಕನು ಸೈನಿಕನಾಗಿರಲಾರನು. ಸೈನ್ಯಗಳಲ್ಲಿಯ ಸೈನಿಕರು ಒಬ್ಬೊಬ್ಬರಾಗಿ ಅಲ್ಲ,

ಆದರೆ ಗುಂಪಾಗಿ ವರ್ತಿಸುವರು. ಆತ್ಮಿಕತೆಯು ಸಮುದಾಯದ್ದಾಗಿದೆ. ಕ್ರೈಸ್ತತ್ವವು ಸಮುದಾಯದ್ದಾಗಿದೆ. ಧಾರ್ಮಿಕ ಜಗತ್ತು ಇದನ್ನು ಕಡೆಗಣಿಸುತ್ತದೆ ಇಲ್ಲವೇ ತಿರಸ್ಕರಿಸುತ್ತದೆ. ಸಭೆಗೆ ನಿನ್ನನ್ನು ತರದೇ ಇರುವಂಥದ್ದು, ದೇವರದಾಗಿರುವದಿಲ್ಲ. ರಕ್ಷಿಸಲ್ಪಟ್ಟವರು ಒಂದು ದೇಹದೊಳಗೆ ತರಲ್ಪಟ್ಟಿದ್ದಾರೆ. ಸಭೆಯು ಒಂದು ದೇಹ ವಾಗಿದೆ, ಒಂದು ಕುಟುಂಬವಾಗಿದೆ, ಒಂದು ಸಮಾಜವಾಗಿದೆ. ನಾವು ದೇವರ ಜನಾಂಗವಾಗಿದ್ದೇವೆ. ದೇವರು ಯಾವನಿಗಾದರೂ ಒಬ್ಬಂಟಿಗನಾಗಿ ಕ್ರೈಸ್ತ ಜೀವನ ಜೀವಿಸಲು ಎಂದಿಗೂ ಉದ್ದೇಶಿಸಿರಲಿಲ್ಲ. ಪರಿಶುದ್ಧ ಬರಹಗಳಲ್ಲೆಲ್ಲಾ ದೇವರು ಯಾವಾಗಲೂ ತನ್ನ ಜನರನ್ನು ಸಮುದಾಯದ ಏರ್ಪಾಟಿನೊಳಗೆ ಕರೆದನು. ಆತನು ಅಬ್ರಹಾಮನ ಕುಟುಂಬವನ್ನು ಕರೆದನು, ಆ ಮೇಲೆ ಇಸ್ರಾಯೇಲ ಜನಾಂಗವನ್ನು ಕರೆದನು ಮತ್ತು ಈಗ ಸಭೆಯನ್ನು ಕರೆದನು. ಸಮಾಜವು ಸ್ವಾರ್ಥತೆಗೆ ಕೇವಲ ಉತ್ತರ ವಾಗಿದೆ. ಕ್ರಿಸ್ತನ ದೇಹದಲ್ಲಿ ಯಾರೂ ಕಳೆದು ಹೋಗುವದಿಲ್ಲ. ಸಾಮುದಾಯಿಕ ಭಾಗವನ್ನು ನೀವು ಸರಿಯಾಗಿ ಮಾಡುವಾಗ, ವೈಯಕ್ತಿಕ ಭಾಗವು ಸರಿಯಾಗಿರುತ್ತದೆ. ಸಮರ್ಪಣೆಯು ಬೆಳೆಯುವದಕ್ಕಿಂತ ಮೊದಲು ಸಮಾಜವು ಅಸ್ತಿತ್ವಕ್ಕೆ ಬರತಕ್ಕದ್ದು. ದೇಹ ಮಾತ್ರವೇ ಸದಸ್ಯರನ್ನು ಸಂಪೂರ್ಣವಾಗಿ ಮಾಡುತ್ತದೆ. ವೈಯಕ್ತಿಕ ಸ್ತೋತ್ರವು ಅಗತ್ಯವಾಗಿದೆ, ಆದರೆ ನಂಬಿಗಸ್ತ ಜನರಿಗಾಗಿ ಸಾಕಷ್ಟಾಗಿರುವದಿಲ್ಲ. ಒಬ್ಬ ವ್ಯಕ್ತಿಯು ಇನ್ನೂ ಹೆಚ್ಚಾಗಿ ಸ್ವತಂತ್ರನಾಗುವದರಿಂದ ಎಂದೂ ನಿಜವಾಗಿ ನೆರವೇರಲ್ಪಡುವದಿಲ್ಲ.

ಪಂದ್ಯಾಟಗಳ ಘಟನೆಗಳಲ್ಲಿ ಜನಸಮೂಹಗಳಿರಬಹುದು ಮತ್ತು ಪ್ರೇರೇಪ ಣೆಯಿರಬಹುದು, ಆದರೆ ನಿಜವಾದ ಸಮಾಜವು ಅಲ್ಲಿ ಅಸ್ತಿತ್ವದಲ್ಲಿ ಇರುವದಿಲ್ಲ, ಇರಲಾರದು. ಈ ಜನಸಮೂಹಗಳ ಸದಸ್ಯರು ಒಬ್ಬರನ್ನೊಬ್ಬರು ತಿಳಿದಿರುವದಿಲ್ಲ ಹಾಗೂ ಒಬ್ಬರಿಗೊಬ್ಬರು ಚಿಂತಿಸುವವರಾಗಿರುವದಿಲ್ಲ. ನಾವು ಒಂದು ಜನರ ಗುಂಪಾಗಿದ್ದೇವೆ. ನಾವು ಒಂದು ಸಭೆಯಾಗಬಹುದೋ? ಒಂದು ಸಮಾಜವಾಗಿ, ಸಭೆಗೆ ಅದರ ಸ್ವಂತ ಜೀವನವಿರುತ್ತದೆ. ನಾವು *ಯಾರಾಗಿದ್ದೇವೆ,* ನಾವು *ಯಾರರವರು* ಆಗಿದ್ದೇವೆ, ಮತ್ತು ನಾವು *ಯಾಕೆ* ಇದ್ದೇವೆ ಎಂಬುದನ್ನು ನಾವು ತಿಳಿಯತಕ್ಕದ್ದು. ಸಭೆಯಲ್ಲಿ ಮಾತ್ರವೇ ಕ್ರೈಸ್ತರು ದೇವರನ್ನು ಮಹಿಮೆಪಡಿಸುತ್ತಾರೆ. "ದೇವರಿಗೆ ಸಭೆಯಲ್ಲಿಯೂ ಕ್ರಿಸ್ತ ಯೇಸುವಿನಲ್ಲಿಯೂ ತಲತಲಾಂತರಕ್ಕೂ ಯುಗಯುಗಾಂತರಕ್ಕೂ ಸ್ತೋತ್ರ. ಆಮೆನ್" (ಎಫೆಸ 3:21).

"ದೇಹದ" ತತ್ವವನ್ನು ನಾವು ಗ್ರಹಿಸಿಕೊಳ್ಳತಕ್ಕದ್ದು. ದೇವರು ನಮ್ಮನ್ನು ಒಂದು ಕಟ್ಟಡದಲ್ಲಿಯ ಕಲ್ಲುಗಳೆಂದೂ, ದ್ರಾಕ್ಷೀತೋಟದಲ್ಲಿಯ ಕೆಲಸದವರೆಂದೂ ಮತ್ತು ಒಂದು ಸೈನ್ಯದಲ್ಲಿಯ ಸೈನಿಕರೆಂದೂ ಕರೆಯುತ್ತಾನೆ. ಹೀಗಿದ್ದರೂ ಪರಿಶುದ್ಧ ಬರಹಗಳ ಲ್ಲಿಯ ಅತ್ಯುತ್ತಮವಾದ ರೂಪಕವು ಕ್ರೈಸ್ತರನ್ನು "ದೇಹ" ಎಂದು ಉಲ್ಲೇಖಿಸುತ್ತದೆ (ರೋಮಾಪುರ 12; 1 ಕೊರಿಂಥ 12; ಎಫೆಸ 4; 1 ಪೇತ್ರ 3). ದೇಹವು ಆಶ್ಚರ್ಯಕರ ವಾದ ಅಂಗವಾಗಿದೆ. ಅದರಂಥದ್ದು ಭೂಲೋಕದಲ್ಲಿ ಯಾವುದೂ ಇರುವದಿಲ್ಲ. ಅದಕ್ಕೆ ಭಿನ್ನವಾದ ಅಂಗಗಳಿದ್ದರೂ, ಅವು ಸರಿಸಮಾನವಾದವುಗಳಾಗಿವೆ. ಕೀಳುಮಟ್ಟದ ಭಾಗಗಳೆಂದು ಹೇಳಲ್ಪಡುವವುಗಳೂ ಹೆಚ್ಚು ಶ್ರೇಷ್ಠವಾದವುಗಳಾಗಿರಬಹುದು. ದೇಹದ ಅಂಗಗಳು ದೇಹದಿಂದ ಕಡಿದು ಹಾಕಲ್ಪಟ್ಟರೆ ಕಾರ್ಯ ಮಾಡಲಾರವು. ಹಾಗೆಯೇ ಸಭೆಯು ಒಂದು ದೇಹದಂತೆ ಕಾರ್ಯಮಾಡದೇ ಇರುವಾಗ ಅಗಾಧವಾದ ಸಮಸ್ಯೆ ಗಳು ಉದ್ಭವಿಸುವವು. ವೈಯಕ್ತಿಕ ಆತ್ಮಿಕ ವರಗಳು ದೇಹಕ್ಕಾಗಿ ಕೊಡಲ್ಪಟ್ಟಿರು ತ್ತವೆ, ಆದರೆ ವ್ಯಕ್ತಿಗಳಿಗಾಗಿ ಕೊಡಲ್ಪಟ್ಟಿರುವದಿಲ್ಲ. ನೋವು ಹೊಂದಿದ ಒಬ್ಬ ಸದಸ್ಯನು, ಇಡೀ ದೇಹಕ್ಕೆ ನೋವನ್ನು ಕೊಡುತ್ತಾನೆ. ಸಭೆಯು ಒಂದಾಗಿ ಕೆಲಸ ಮಾಡುವಾಗ

ಮಾತ್ರವೇ ಕಾರ್ಯ ಮಾಡುತ್ತದೆ.

ಯಾರಾದರೊಬ್ಬನು ಯಾವುದೇ ಗುಂಪನ್ನು ಸೇರಿಕೊಳ್ಳುವಾಗ, ಅವನು ಅದರ ಗುರಿಗಳನ್ನು ಸ್ವೀಕರಿಸುತ್ತಾನೆ ಮತ್ತು ಅದರ ನಿಯಮಗಳಿಂದ ಜೀವಿಸುತ್ತಾನೆ. ದೇಹದ ಅಂಗದಂತೆ, ಯಾವನೂ, "ನನ್ನ ಮನಸ್ಸಿಗೆ ಬಂದಂತೆ ಮಾಡುತ್ತೇನೆ - ಅದು ಇತರರಿಗೆ ನೋವನ್ನು ಕೊಡುವದಿಲ್ಲ" ಎಂದು ಹೇಳಲಾರನು. ದೇಹದಲ್ಲಿ ಒಬ್ಬನು ಕಷ್ಟಪಡುವಾಗ, ಎಲ್ಲರೂ ಕಷ್ಟಪಡುತ್ತಾರೆ. ಒಬ್ಬ ಸಹೋದರನು ಎಡವಿ ಬೀಳುವದಕ್ಕೆ ಕಾರಣವಾದರೆ ತಾನು ಮಾಂಸವನ್ನು ತಿನ್ನುವದಿಲ್ಲ ಎಂದು ಪೌಲನು ಹೇಳಿದನು (1 ಕೊರಿಂಥ 8:13). ದೇಹದ ಹಕ್ಕುಗಳು ಮತ್ತು ಅಗತ್ಯತೆಗಳು ಆ ವ್ಯಕ್ತಿಗಳನ್ನು ವಶಪಡಿಸಿಕೊಳ್ಳುತ್ತವೆ.

## ಸಭೆಯು ಸ್ಥಳಿಕವಾದದ್ದಾಗಿದೆ

ಸಭೆಯು ದೇಹವಾಗಿದೆ. ಸಭೆಯು ಸ್ಥಳಿಕವಾದದ್ದೂ ಆಗಿದೆ. ಸ್ಥಳಿಕ ಸಭೆಯಲ್ಲಿ ಬೆಲೆಯಿಲ್ಲವೆಂದು ಹೆಚ್ಚಾದವರು ಭಾವಿಸುತ್ತಾರೆ. ಹೆಚ್ಚಾದವರ ಹೃದಯದಲ್ಲಿ ಸ್ಥಳಿಕ ಸಭೆಯು ಕೊನೆಯದೂ ಕನಿಷ್ಠವಾದದ್ದೂ ಆಗಿರುತ್ತದೆ. ಹೌದು, ಒಂದು "ವಿಶ್ವವ್ಯಾಪಿ ಸಭೆಯು" ಇರುವುದು. ದೇವರ "ಸಭೆಯ ಸುರುಳಿಯು" - "ಕುರಿಮರಿಯಾದಾತನ ಜೀವದ ಪುಸ್ತಕವು" ಪರಲೋಕದಲ್ಲಿ ಇರುವುದು. ಹೀಗಿದ್ದರೂ ನಮ್ಮ ಭೂಲೋಕದ ಸಂಪರ್ಕವು ಸ್ಥಳಿಕವಾಗಿರುವುದು. "ಸ್ಥಳಿಕವನ್ನು" ತಿರಸ್ಕರಿಸುವಾಗ ನೀವು "ವಿಶ್ವವ್ಯಾ ಪಿಯಾದದ್ದರ" ಭಾಗವಾಗಿರುವೆವೆಂದು ಹೇಳಿಕೊಳ್ಳಲಾರಿರಿ. ಇಂದು ವಿಶ್ವವ್ಯಾಪಕತ್ವದ ಕಡೆಗೆ ಜನರಿಗೆ ಭಾವನಾತ್ಮಕವಾದ ಇಲ್ಲವೇ ಸಕಾರಾತ್ಮಕವಾದ ಭಾವನೆಯಿದೆ; ಅವರಿಗೆ ಸ್ಥಳಿಕತೆಯ ಉಪಯೋಗವಿರುವದಿಲ್ಲ. ಸ್ಥಳಿಕರು ಮಾತ್ರವೇ ವಿಶ್ವವ್ಯಾ ಪಿಯಾದದ್ದರಲ್ಲಿ ಇರುತ್ತಾರೆ. ಸಭೆಯು ಸ್ಥಳಿಕವಾಗಿ ಮಾತ್ರವೇ ಅಸ್ತಿತ್ವದಲ್ಲಿ ಇರುತ್ತದೆ. ಅಂತಿಮವಾಗಿ ಸ್ಥಳಿಕ ಸಭೆಗೆ ಲಾಭಕೊಡದಂಥ ಯಾವುದೇ ಸಂಗತಿಯು ದೇವರದಾಗಿರುವದಿಲ್ಲ. ಪ್ರಕಟನೆ 1:4, "ಏಶಿಯಾದಲ್ಲಿಯ ... ಏಳು ಸಭೆಗಳ" ಬಗ್ಗೆ ಮಾತಾಡುತ್ತದೆ. ಯೆರೂಸಲೇಮು ಸ್ಥಳಿಕ ಸಭೆಯಾಗಿತ್ತು. ಹೊಸ ಒಡಂಬಡಿಕೆಯಲ್ಲಿ ಸಹೋದರರು ಚದರಿಹೋದಾಗ ಅವರು ಮೊದಲು ಸ್ಥಳಿಕ ಸಭೆಯನ್ನು ಸ್ಥಾಪಿಸಿದರು.

ದೇವರೊಂದಿಗಿನ ನಮ್ಮ ಅನುದಿನದ ನಡೆಯುವಿಕೆಯು "ಸ್ಥಳಿಕ ಸಭೆಯ ನಡೆಯುವಿಕೆಯಾಗಿದೆ." ದೇವಾಲಯದಲ್ಲಿ ಜನರ ಹಾಜರಿಯ ಬಗ್ಗೆ ಸಹೋದರರು ಚಿಂತಿಸುತ್ತಾರೆ, ಯಾಕಂದರೆ ಅನೇಕ ಸ್ಥಳಗಳಲ್ಲಿ ಅದು ಕಡಿಮೆಯಾಗಿದೆ. ನಂಬಿಗಸ್ತ ಅನುದಿನದ ನಡೆಯುವಿಕೆ ಇರುವ ಸಹೋದರರಿಗೆ "ದೇವಾಲಯದಲ್ಲಿ ಹಾಜರಿರುವ ಜನರ ಸಮಸ್ಯೆಗಳಿರುವದಿಲ್ಲ." ಭಾನುವಾರ ಬರುವಾಗ ದೇವರು ಎಲ್ಲಿರುತ್ತಾನೆ? ದೇವಾಲಯದಲ್ಲಿ! ಭಾನುವಾರ ದೇವರೊಂದಿಗೆ ನಡೆಯುತ್ತಿರುವವರು ಎಲ್ಲಿರುತ್ತಾರೆ? ದೇವಾಲಯದಲ್ಲಿ! ವಿಶ್ವವ್ಯಾಪಿ ಸಭೆಯಲ್ಲಿಯ ಸದಸ್ಯತ್ವಕ್ಕಿಂತ ಹೆಚ್ಚಾಗಿ ಸ್ಥಳಿಕ ಸಭೆಯಲ್ಲಿಯ ಸದಸ್ಯವು ಐಚ್ಛಿಕವಾದದ್ದಾಗಿರುವದಿಲ್ಲ. ಯಾವುದೇ ಸದಸ್ಯನು ಸ್ಥಳಿಕ ಸಭೆಗಾಗಿ ಯಾವುದೇ ಸದಸ್ಯನು ಮಾಡಬಹುದಾದ ಅತೀ ದೊಡ್ಡ ಸಂಗತಿಯು ತಾನೇ ಬೆಳೆಯುವಂಥದ್ದಾಗಿರುತ್ತದೆ. ಸಭೆಗಳು ತಮ್ಮ ಸದಸ್ಯರಿಗಿಂತ ಹೆಚ್ಚು ಉತ್ತಮವಾಗಿರಲಾರವು "ದೊಡ್ಡದಾಗಿ" ಬೆಳೆಯಲು ಒಂದು ಸಭೆಯು "ಬೆಳೆಯ ತಕ್ಕದ್ದು." ಬಲಹೀನ ಸದಸ್ಯರನ್ನೊಳಗೊಂಡ ದೊಡ್ಡ ಸಭೆಯು ನಿನಗಿರಲಾರದು. ಪ್ರತಿಯೊಬ್ಬನು ಕರ್ತನ ದೇಹದಲ್ಲಿ ಏನಾದರೂ ಆಗಿರುತ್ತಾನೆ! ನಮ್ಮ ಅನುದಿನದ ನಡೆಯುವಿಕೆಯು ದೇವರ ಕೃಪೆಗಳ ಒಳ್ಳೆಯ ಮನೆವಾರ್ತೆಯವರಾಗಿರುವುದು; ಇದು ಸ್ಥಳಿಕ ಸಭೆಯಲ್ಲಿ ಮಾತ್ರವೇ ಮಾಡಲ್ಪಡುತ್ತದೆ. ಸಭೆಯ ಐಕ್ಯತೆಗಿಂತ ಹೆಚ್ಚಾಗಿ ತನ್ನ

ಕ್ರಿಸ್ತೀಯ ಸ್ವಾತಂತ್ರ್ಯವನ್ನು ಬಯಸುವ ಯಾವುದೇ ಸದಸ್ಯನು ಯೇಸುವಿಗಿಂತ ಹೆಚ್ಚಾಗಿ ತನ್ನ ಬಗ್ಗೆಯೇ ಯೋಚಿಸಿಕೊಳ್ಳುತ್ತಾನೆ. ಸಭೆಯು ಇತರರಿಗಾಗಿ ಅಸ್ತಿತ್ವದಲ್ಲಿರುವಾಗ ಮಾತ್ರವೇ ಸಭೆಯಾಗಿರುತ್ತದೆ. ಯಾರೂ ತನ್ನ ಮೇಲೆ ಮತ್ತು ಯೇಸುವಿನ ಮೇಲೆ ಒಂದೇ ಸಮಯದಲ್ಲಿ ಕೇಂದ್ರೀಕರಿಸಿಕೊಳ್ಳಲಾರರು. ದೊಡ್ಡ ಜನರು ಬಹಿರಂಗದಲ್ಲಿ ದೊಡ್ಡವರಾಗಿರುತ್ತಾರೆ, ಆದಾಗ್ಯೂ ಖಾಸಗಿಯಾಗಿ ಇನ್ನೂ ಹೆಚ್ಚು ದೊಡ್ಡವರಾಗಿರುತ್ತಾರೆ. ಕ್ರೈಸ್ತತ್ವವು ಸ್ಥಳಿಕ ಸಭೆಯೊಂದಿಗೆ ಪ್ರಾರಂಭಿಸುತ್ತದೆ ಮತ್ತು ಅಂತ್ಯಗೊಳ್ಳುತ್ತದೆ. ಸ್ಥಳಿಕ ಸಭೆಯೊಂದಿಗೆ ಅಧಿಕವಾದ ಸಮರ್ಪಣೆಯನ್ನು ಮಾಡಿಕೊಳ್ಳಿರಿ. ತನ್ನ ಸಭೆಯನ್ನು ಹೊರತುಪಡಿಸಿ ಕ್ರಿಸ್ತನು ಯಾವುದನ್ನೂ ಮಾಡುವದಿಲ್ಲ. ಸ್ಥಳಿಕ ಸಭೆಗೆ ಸಮರ್ಪಿಸಿ ಕೊಳ್ಳದೇ ಯಾರೂ ಆತ್ಮಿಕ ಪ್ರೌಢಾವಸ್ಥೆಗೆ ಎಂದೂ ಬೆಳೆಯಲಾರರು. ನನಗೆ ನೀನು ಬೇಕು ... ನಿನಗೆ ನಾನು ಬೇಕು: ಅದು ಸಭೆಯಾಗಿರುತ್ತದೆ!

## ಶಿಷ್ಯತ್ವ

ಶಿಷ್ಯರನ್ನು ಬಿಟ್ಟು ನೀವು ಯಾವುದೇ ಸಂಗತಿಯಿಂದ ಕ್ರಿಸ್ತನ ಸಭೆಯನ್ನು ಕಟ್ಟಲಾರಿರಿ. ತನ್ನ ಶಿಷ್ಯರಿಲ್ಲದೇ ಯೇಸುವು ಸಂಪೂರ್ಣನಾಗಿರುವದಿಲ್ಲ. ಮಹಾ ಆಜ್ಞೆಯು ಶಿಷ್ಯರನ್ನು ಮಾಡಬೇಕೆಂದು ಹೇಳುತ್ತದೆ (ಮತ್ತಾಯ 28:18-20). ಸಭೆಯು ಪ್ರಾಮುಖ್ಯವಾಗಿ ಎರಡು ಕೆಲಸಗಳನ್ನು ಮಾಡಲು ಇಲ್ಲಿ ಇರುತ್ತದೆ: (1) ಆತ್ಮಗಳನ್ನು ರಕ್ಷಿಸುವುದು, ಮತ್ತು (2) ದೇವ ಜನರನ್ನು ಮಾಡುವುದು. ಸಭೆಯು ಮೂಲವಾಗಿ ಇದನ್ನು ಬಿಟ್ಟು ಪ್ರತಿಯೊಂದನ್ನು ಮಾಡುತ್ತಲಿದೆ! "ಶಿಷ್ಯರು ಅಂತಿಯೋಕ್ಯದಲ್ಲಿ ಮೊದಲು ಕ್ರೈಸ್ತರು ಎಂದು ಕರೆಯಲ್ಪಟ್ಟರು" (ಅಪೊಸ್ತಲರ ಕೃತ್ಯಗಳು 11:26ಬಿ). ಆದಿ ಸಭೆಯು ಶಿಷ್ಯರನ್ನು ಮಾಡಿತು; ಆಧುನಿಕ ಸಭೆಯು ತೀರ್ಮಾನಗಳಿಗಾಗಿ ಮಾತ್ರವೇ ಕೇಳುತ್ತದೆ. ಆದಿ ಸಭೆಯಲ್ಲಿಯ ಜನರು "ಸಾಮಾನ್ಯರಾಗಿದ್ದರು"; ಆಧುನಿಕ ಸಭೆಯಲ್ಲಿಯವರು "ಉಪಭೋಗಿಸುವವರು" ಆಗಿದ್ದಾರೆ. ಯೇಸುವು ನಮ್ಮನ್ನು ಸಾಯಲು ಶಿಲುಬೆಗೆ ಕರೆಯುತ್ತಾನೆ. ಇಂದು ಜನರು ನಮಗೆ ಇಷ್ಟಬಂದಂತೆ ಮಾಡಲು ಕರೆಯುತ್ತಾರೆ.

> "ಯಾವನಿಗಾದರೂ ನನ್ನ ಹಿಂದೆ ಬರುವದಕ್ಕೆ ಮನಸ್ಸಿದ್ದರೆ ಅವನು ತನ್ನನ್ನು ನಿರಾಕರಿಸಿ ತನ್ನ ಶಿಲುಬೆಯನ್ನು ದಿನಾಲೂ ಹೊತ್ತುಕೊಂಡು ನನ್ನ ಹಿಂದೆ ಬರಲಿ. ತನ್ನ ಪ್ರಾಣವನ್ನು ಉಳಿಸಿಕೊಳ್ಳಬೇಕೆಂದಿರುವವನು ಅದನ್ನು ಕಳಕೊಳ್ಳುವನು; ಆದರೆ ನನ್ನ ನಿಮಿತ್ತವಾಗಿ ತನ್ನ ಪ್ರಾಣವನ್ನು ಕಳಕೊಂಡವನು ಅದನ್ನು ಉಳಿಸಿಕೊಳ್ಳುವನು" (ಲೂಕ 9:23ಬಿ, 24).

"ಸ್ವ - ಗೌರವ" ಎಂದು ಜಗತ್ತು ಬೋಧಿಸುತ್ತದೆ. ತನ್ನನ್ನು ನಿರಾಕರಿಸಿಕೊಳ್ಳುವುದು ಎಂದು ಕ್ರಿಸ್ತನು ಬೋಧಿಸುತ್ತಾನೆ. ಕರ್ತವ್ಯ, ನಿಷ್ಠೆ, ಒಪ್ಪಿಸಿಕೊಳ್ಳುವಿಕೆ, ಪ್ರತಿಷ್ಠಿಸಿಕೊಳ್ಳುವಿಕೆ ಮತ್ತು ತ್ಯಾಗ ಶಿಷ್ಯರನ್ನಾಗಿ ಮಾಡುತ್ತವೆ. "ಅದರಲ್ಲಿ ನನಗೆ ಏನು ಇದೆ?" ಎಂದು ಜಗತ್ತು ಕೇಳುತ್ತದೆ. ದೇವರು *ತನ್ನ ಬಳಿಗೆ* ನಮ್ಮನ್ನು ಕರೆಯುತ್ತಾನೆ. ಸಮಾಜದ ಮುಖಾಂತರ ಜಗತ್ತಿನ ರಕ್ಷಣೆಯು ಪ್ರಸರಿಸಲ್ಪಡುತ್ತದೆ. ನಮಗೆ ಕೇವಲ ಒಂದು ಸೇವೆಯು *ಇರುವದಿಲ್ಲ* - ನಾವು *ಒಂದಾಗಿದ್ದೇವೆ* (1 ಪೇತ್ರ 4:10, 11). ಗುಂಪು ಪಂದ್ಯಾಟಗಳಲ್ಲಿ ನಾವು ಸತತವಾಗಿ ಆಟಗಾರರಿಗೆ ಒಂದು ಸಂಗತಿಯನ್ನು ಜ್ಞಾಪಕಕ್ಕೆ ತರುತ್ತೇವೆ: "ನಿಮ್ಮ ಸ್ಥಾನವನ್ನು ಆಡಿರಿ." ಪ್ರತಿಯೊಂದು ಸಭೆಗೆ ಪ್ರತಿಯೊಬ್ಬ ಸದಸ್ಯನು ತನ್ನ ಪಾತ್ರ ಮಾಡುವ ಅಗತ್ಯತೆ ಇರುತ್ತದೆ. ತನ್ನನ್ನು ಕಂಡುಕೊಳ್ಳುವದಕ್ಕಾಗಿ, ಒಬ್ಬನು ತನ್ನನ್ನು ಕಳೆದುಕೊಳ್ಳತಕ್ಕದ್ದು.

ಸ್ವಯಂ - ನೆರವೇರುವಿಕೆಯ ಮೇಲೆ ಕೇಂದ್ರೀಕರಿಸಿಕೊಂಡವನಿಗೆ ಈ ಸತ್ಯವು ಕಠಿಣವಾದದ್ದಾಗಿರುತ್ತದೆ. ಶಿಷ್ಯರು ಜೀವಿಸುವದಕ್ಕಾಗಿ ಸಾಯುತ್ತಾರೆ (1 ಕೊರಿಂಥ 15:31). ಸಭೆಯ ಪ್ರತಿಯೊಬ್ಬ ಸದಸ್ಯನು ಯಾಜಕನಾಗಿದ್ದಾನೆ ಮತ್ತು ಸೇವಕನಾಗಿದ್ದಾನೆ. ಮೊತ್ತವು ಅದರ ಭಾಗಗಳಿಗಿಂತ ಯಾವಾಗಲೂ ಹೆಚ್ಚು ದೊಡ್ಡದಾಗಿರುತ್ತದೆ. ಸಭೆಯು ತನ್ನ ಸದಸ್ಯರು ಶಿಷ್ಯರಾಗುವವರೆಗೆ ಎಂದೂ ಯಾವುದನ್ನೂ ಮಾಡುವದಿಲ್ಲ. ಆದಿ ಸಭೆಗೆ ಸಮರ್ಪಣೆಯಿತ್ತು; ಆಧುನಿಕ ಸಭೆಗೆ ಸಮಿತಿಗಳು ಇರುತ್ತವೆ.

"ಬಿಡಲ್ಪಟ್ಟವುಗಳಿಂದ" ನೀವು ಸಭೆಯನ್ನು ಕಟ್ಟಲಾರಿರಿ. ದೇವರು "ಕೊನೆಯದಕ್ಕೆ ಮತ್ತು ಕನಿಷ್ಠವಾದದ್ದಕ್ಕೆ" ಕೆಳಗಿಳಿಸಲ್ಪಡಲಾರನು. "ದೇಹದ" ತತ್ವವು ಹೊಣೆಗಾರಿಕೆಯನ್ನು ಹೊರಿಸುತ್ತದೆ. "ಕ್ರಿಸ್ತನ ಸಭೆಯು" "ನನ್ನ ಸಭೆಯೂ" ಆಗತಕ್ಕದ್ದು. ಸಭೆಯು "ವಾರಕ್ಕೆ ಒಂದು ತಾಸಿನ ಆರಾಧನೆಯ ಸಮಾಜವಾಗಿ" ಕೆಳಗಿಳಿಸಲ್ಪಡಬಾರದು. ಹೊರಗಿನ ಜಗತ್ತು ಸಭೆಯನ್ನು ಕೂಟಗಳ ಮತ್ತು ಘಟನೆಗಳ ಸರಣಿಯಂತೆ ನೋಡುತ್ತದೆ. ಆದಿ ಸಭೆಯು ತಮ್ಮ ಜೀವದಂತೆ ಸಭೆಯ ಕಡೆಗೆ ನೋಡಿತು. "ರೋಷವಿಲ್ಲದೆ ದೇವರು, ಪಾಪವಿಲ್ಲದ ಜನರನ್ನು ನ್ಯಾಯತೀರ್ವಿಕೆ ಇಲ್ಲವೇ ಒಂದು ರಾಜ್ಯದೊಳಗೆ ಶಿಲುಬೆಯಿಲ್ಲದ ಕ್ರಿಸ್ತನ ಸೇವೆಗಳ ಮುಖಾಂತರ ತಂದನು."[1] ಎಂದು ರಿಚಾರ್ಡ್ ನೀಬರ ಹೇಳಿದ್ದಾನೆ. ಇದು ಇಂದಿನ ಹುಚ್ಚುತನವಾಗಿದೆ. ಬೈಬಲಿನ ಸಭೆಯಲ್ಲಿ, "ನಾನು ಒಳಗೊಂಡಿದ್ದೇನೆ" ಮತ್ತು "ನಾನು ಪ್ರೀತಿಸುತ್ತೇನೆ ಹಾಗೂ ಪ್ರೀತಿಸಲ್ಪಡುತ್ತೇನೆ." ಇಂದಿನ ಸಭೆಯು ಆರೈಕೆ ಮಾಡುವ ಗುಂಪು ಇಲ್ಲವೇ ರಾಜಕೀಯ ಪ್ರಭಾವ ಆಗುವದರಿಂದ ಜಗತ್ತನ್ನು ರಕ್ಷಿಸಬಹುದು ಎಂದು ಯೋಚಿಸುವ ಶೋಧನೆಯಲ್ಲಿರುವಂತೆ ಕಾಣುತ್ತದೆ. ಸಭೆಯು ಸುವಾರ್ತೆಯನ್ನು ಸಾರಲು ಮತ್ತು ಜೀವಿಸಲು ಕರೆಯಲ್ಪಟ್ಟಿದೆ. *ನಂಬಿಗಸ್ತರಾಗಿರಿ* ... ಒಂದು ದಿನ ಒಂದು ಸಮಯಕ್ಕೆ.

ನಾನು ಆಶೀರ್ವದಿಸಲ್ಪಟ್ಟಿದ್ದೇನೆ. ನಾನು "ಸಭೆಯಲ್ಲಿ ಬೆಳಸಲ್ಪಟ್ಟಿದ್ದೇನೆ" ಮತ್ತು ಸಭೆಯನ್ನು ಪ್ರೀತಿಸಬೇಕೆಂದು ಬೋಧಿಸಲ್ಪಟ್ಟಿದ್ದೇನೆ ನನ್ನ ಜೀವನದಲ್ಲೆಲ್ಲಾ ಸಭೆಯು ಸತತವಾಗಿ ಇದೆ. ಸಭೆಯಿಲ್ಲದೆ ಜನರು ಏನು ಮಾಡುವರು?

***ಬನ್ನಿರಿ. ನನ್ನೊಂದಿಗೆ ನಡೆಯಿರಿ.***

ಟಿಪ್ಪಣಿ

[1]H. Richard Niebuhr, *The Kingdom of God in America* (New York: Harper & Row, 1959), 193.

© 2009 Truth for Today